**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಪಂ.ದೀ.ಘಟಿಕೋತ್ಸವ/2015-16 ದಿನಾಂಕ: 30.08.2016

**ಸೂಚನಾ ಪತ್ರ**

**ವಿಷಯ: ಪಂಚಮ ಘಟಿಕೋತ್ಸವಕ್ಕೆ ಸುವರ್ಣ ಪದಕಗಳನ್ನು ಸಿದ್ಧಪಡಿಸಿಕೊಡಲು ದರಪಟ್ಟಿ ಕರೆಯುವ ಬಗೆಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2014-15ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪಂಚಮ ದೀಕ್ಷಾಂತ ಘಟಿಕೋತ್ಸವದಲ್ಲಿ ಸುವರ್ಣ ಪದಕಗನ್ನು ನೀಡಬೇಕಾಗಿದ್ದು, ಅದನ್ನು ತಯಾರಿಸಲು ದರಪಟ್ಟಿಯನ್ನು ಕರೆಯಲಾಗಿದೆ. ಈ ಕೆಳಕಂಡ ಅಂಶಗಳನ್ನು ಗಮನಿಸಿ ಸೂಚನಾ ಪತ್ರ ಹೊರಡಿಸಿದ ದಿನಾಂಕದಿಂದ 21 ದಿನಗಳೊಳಗೆ ದರಪಟ್ಟಿಯನ್ನು ಸಲ್ಲಿಸಬೇಕಾಗಿದೆ.

- ದತ್ತಿನಿಧಿ ಸ್ಥಾಪಿಸಿರುವ ವಿವಿಧ ಸಂಸ್ಥೆಗಳ ವಿವರಗಳನ್ನು ಒಳಗೊಂಡ ಒಟ್ಟು ಹದಿನೈದು ಸ್ವರ್ಣಪದಕಗಳನ್ನು ಸಿದ್ಧಪಡಿಸಿಕೊಡುವುದು. (ಸಂಖ್ಯೆಯಲ್ಲಿ ಅಲ್ಪ ಪ್ರಮಾಣದ ವ್ಯತ್ಯಾಸ ಆಗಬಹುದು.)
- ಪ್ರತಿಯೊಂದು ಸ್ವರ್ಣಪದಕಗಳಿಗೆ ಚಿನ್ನದ ಬಿಲ್ಲೆಯಲ್ಲಿ ವಿಶ್ವವಿದ್ಯಾಲಯದ ಲಾಂಛನ (ಲೋಗೋ)ವನ್ನು ಟಂಕಿಸಿ ಅಳವಡಿಸುವುದು.
- ಸ್ವರ್ಣ ಪದಕಗಳಿಗೆ ಸರಬರಾಜು ಆದೇಶ ನೀಡಿದಾಗಿನ ವೇಳೆಯಲ್ಲಿನ ಚಿನ್ನದ ಮೇಲಿನ ಮಾರುಕಟ್ಟೆ ದರವನ್ನು ನಿಗಧಿಗೊಳಿಸುವುದು.
- ಉತ್ಕೃಷ್ಟ ಗುಣಮಟ್ಟದಲ್ಲಿ ಸ್ವರ್ಣ ಪದಕವನ್ನು ಸಿದ್ಧಪಡಿಸುವುದು. (22 ಕ್ಯಾರೆಟ್)
- ವಿಶ್ವವಿದ್ಯಾಲಯದ ಲಾಂಛನ ಹಾಗೂ ವಿವರಗಳನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸಕೂಡದು.
- ಲಾಂಛನಕ್ಕೆ ಬಳಸಿದ ಡೈಗಳನ್ನು ವಿಶ್ವವಿದ್ಯಾಲಯದ ವಶಕ್ಕೆ ನೀಡುವುದು.
- ವೇಸ್ಟೇಜ್ ಮತ್ತು ಮೇಕಿಂಗ್ ಚಾರ್ಜಸ್‌ಗಳನ್ನು ದರಪಟ್ಟಿಗಳಲ್ಲಿ ಸ್ಪಷ್ಟವಾಗಿ ನಮೂದಿಸುವುದು.
- ಚಿನ್ನದ ಪದಕಗಳಿಗೆ ಉತ್ತಮ ಬ್ಯಾಡ್ಜ್ ಮತ್ತು ಬಾಕ್ಸ್ ಗಳನ್ನು ನೀಡುವುದು.
- ತಪ್ಪದೇ ತಮ್ಮ ಸಂಸ್ಥೆಯ ಟಿನ್‌ನಂಬರ್, ಹಾಗೂ ಪಾನ್‌ಕಾರ್ಡ್ ನಂಬರ್‌ಗಳನ್ನು ದರಪಟ್ಟಿಯಲ್ಲಿ ನಮೂದಿಸುವುದು.

ಕುಲಸಚಿವರು